ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಈ ಕೇಂದ್ರಗಳಲ್ಲಿ ಸಿಬ್ಬಂದಿಗಳ ವರ್ಗಾವಣೆಯಿಂದ ವಸತಿ ಗೃಹಗಳು ಖಾಲಿ ಇರುವುದು ನಿಜವಾಗಿದ್ದು ಗಮನಕ್ಕೆ ಬಂದಿಲ್ಲ.

ಆ) ರಾಜ್ಯದಲ್ಲಿ 1388 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಖಾಲಿಯಿದ್ದು ಇಂತಹ ಸ್ಥಳಗಳಲ್ಲಿ ಪರ್ಯಾಯ ವ್ಯವಸ್ಥೆಯಿಂದ ಗರ್ಭಿಣಿ ಸ್ತ್ರೀಯರಿಗೆ ಸೇವೆಯನ್ನು ಒದಗಿಸಲಾಗುತ್ತಿದೆ.

ಶುಶ್ರೂಷಕಿಯರನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಯಲ್ಲಿ ನೇಮಕ ಮಾಡಲು ತೀರ್ಮಾನ ಕೈಗೊಂಡಿದ್ದು ಇದರಿಂದ ಬಹುತೇಕ ಖಾಲಿ ಹುದ್ದೆಗಳ ಕೊರತೆಯನ್ನು ನೀಗಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮೂಲಕ ಗರ್ಭಿಣಿ ಸ್ತ್ರೀಯರಿಗೆ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಕೆಲವು ಕಡೆ ಅಕ್ಕಪಕ್ಕದ ಸಮೀಪ ಕೇಂದ್ರಗಳಿಂದ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಹೆಚ್ಚುವರಿ ಕಾರ್ಯಭಾರವನ್ನು ಕೊಟ್ಟು ಕೊಂಚಮಟ್ಟಿಗೆ ಕೊರತೆಯನ್ನು ನೀಗಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಖಾಸಗಿ ದಾದಿಯರಿಗೆ ಸ್ಥಳ ತರಬೇತಿ ನೀಡಿ ಗರ್ಭಿಣಿ ಸ್ತ್ರೀಯರಿಗೆ ನೆರವಾಗಲು ಕ್ರಮ ಕೈಗೊಳ್ಳಲಾಗಿದೆ.

ಚಿಂತಾಮಣಿ ತಾಲ್ಲೂಕು ಬುರುಡುಗುಂಟೆ ಗ್ರಾಮದ ಅಂಗಡಿ ಮಳಿಗೆಗಳನ್ನು ಗ್ರಾಮ ಪಂಚಾಯ್ತಿಯವರು ಅಕ್ರಮ ವಿಲೇವಾರಿ

2883 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಬುರುಡುಗುಂಟೆ ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ದಿನಾಂಕ: 9-5-98 ರಂದು ಪಂಚಾಯತಿ ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಬಾಡಿಗೆಗೆ ನೀಡಲು ದಿ 1-5-98 ರಲ್ಲಿ ಸದರಿ ಗ್ರಾಮ ಪಂಚಾಯತಿ ಕಛೇರಿ ಪ್ರಕಟಣೆಯಿಂದ ತಿಳಿಸಿದ್ದರೂ ಸಹ ಆ ದಿನ ಬಹಿರಂಗ ಹರಾಜು ಮಾಡದೆ ನಿಲ್ಲಿಸಿರುವುದು ನಿಜವೇ?

ಆ) ಬಹಿರಂಗ ಹರಾಜು ನಿಲ್ಲಿಸಿ ಪುನಃ ಹರಾಜು ಮಾಡದೆ ಅವರಿಗೆ ಇಷ್ಟ ಬಂದ ವ್ಯಕ್ತಿಗಳಿಗೆ ಕಡಿಮೆ ಬಾಡಿಗೆಗೆ ಸದರಿ ಅಂಗಡಿ ಮಳಿಗೆಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಂತಹ ಅಂಗಡಿಗಳ ಪೈಕಿ ಒಂದರಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಆ ಸಾರಾಯಿ ಮಾರಾಟದ ಅಂಗಡಿ, ಶಾಲೆ ಮತ್ತು ದೇವಸ್ಥಾನದ ಪಕ್ಕದಲ್ಲಿಯೇ ಇದ್ದು, ಶಾಲೆ, ದೇವಸ್ಥಾನದ ಪಕ್ಕದಲ್ಲಿ ಸಾರಾಯಿ ಮಾರಾಟ ಮಾಡದಿರುವಂತೆ ಸರ್ಕಾರದ ಸುತ್ತೋಲೆ ಇದ್ದರೂ ಸಹ ಮೂರು ವರ್ಷಗಳಿಂದ ಈ ಬಗ್ಗೆ ಸರ್ಕಾರವು ಕಾನೂನಿನ ರೀತ್ಯ ಯಾವ ಕ್ರಮವೂ ತೆಗೆದುಕೊಳ್ಳದೆ ಇರುವುದು ಸರಿಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು

ಆ) ಗ್ರಾಮ ಪಂಚಾಯತಿ ನಡವಳಿಕೆ ನಿರ್ಣಯದಂತೆ ತಾತ್ಕಾಲಿಕವಾಗಿ ಬಾಡಿಗೆ ನೀಡಿರುತ್ತದೆ.

ಇ) ಹೌದು

ಈ) ಅಂಗಡಿ, ಮಳಿಗೆಯನ್ನು ತೆರವು ಮಾಡಲು ಗ್ರಾಮ ಪಂಚಾಯತಿಯಿಂದ ತಿಳುವಳಿಕೆ ಪತ್ರ ನೀಡಲಾಗಿದೆ. ಬಾಡಿಗೆದಾರರು ಚಿಂತಾಮಣಿ ಜೆಎಂಎಫ್‌ಸಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಕಳಪೆ ಕಾಮಗಾರಿ ಮತ್ತು ಅಪೂರ್ಣ ಶಾಲಾ ಕಟ್ಟಡಗಳು

2886 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿಂತಾಮಣಿ ತಾಲ್ಲೂಕು ಮರುಗಮಲ್ಲಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಸರ್ಕಾರ ಮಾಧ್ಯಮಿಕ ಮತ್ತು ಹಿರಿಯ ಪ್ರಾಥಮಿಕ ಪಾಠಶಾಲೆಯ ಹೊಸಕಟ್ಟಡವು ಕಳಪೆ ಕಾಮಗಾರಿಯಿಂದಾಗಿ ನೀರು ಸೋರುತ್ತಿದ್ದು, ತರಗತಿಗಳನ್ನು ಸದರಿ ಕಟ್ಟಡದಲ್ಲಿ ನಡೆಸಲಾಗುತ್ತಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳಪೆ ಕಾಮಗಾರಿಯಿಂದ ಬಹಳಷ್ಟು ಶಾಲಾ ಕಟ್ಟಡಗಳು ಉದ್ದೇಶಿತ ಕಾರ್ಯಕ್ಕೆ ಅನುಕೂಲವಾಗಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಬಂದಿದ್ದಲ್ಲಿ ಈ ಕುರಿತು ಕೈಗೊಂಡ ಪರಿಹಾರ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ಹೌದು

3) 2000-2001ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ಸರ್ಕಾರದಿಂದ ರೂ.12.17 ಲಕ್ಷಗಳು ಬಿಡುಗಡೆ ಯಾಗಿದ್ದು ಚಿಂತಾಮಣಿ ತಾಲ್ಲೂಕಿಗೆ ರೂ. 1.00 ಲಕ್ಷಗಳ ಅನುದಾನ ಕಲ್ಪಿಸಲಾಗಿದೆ. ಈ ಅನುದಾನದಿಂದ ದುರಸ್ಥಿ ಕಾರ್ಯಕೈಗೊಳ್ಳಲಾಗುವುದು, ಅಲ್ಲದೆ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರುವ ಇತರೆ ಅನುದಾನದಿಂದ ದುರುಸ್ಥಿಕಾರ್ಯ ಕೈಗೆತ್ತಿಕೊಳ್ಳುವ ಬಗ್ಗೆ ಸಹ ಪರಿಶೀಲಿಸಲಾಗುವುದು.